ಕುಮಾರ ಚಲವಾದಿ, ಹೊಳೆನರಸಿಪುರ

*ಹೆಣ್ಣು ಸಂಸಾರದ ಕಣ್ಣು; ಗಂಡು? ಅತ್ತೆ-ಮಾವ?*



ಗಂಡು ರೆಪ್ಪೆ, ಅತ್ತೆ–ಮಾವ ಕಾಂಟಾಕ್ಟ್ ಲೆನ್ಸ್‌ಗಳು.

ಕೆ.ಎಂ. ಲಿಂಗರಾಜು, ನಂಜನಗೂಡು

*ಲಾಬಿ ಮಾಡಿ ಪಡೆಯುವ ಪ್ರಶಸ್ತಿಗೂ, ಅರ್ಹತೆಯಿಂದ ಪಡೆಯುವ ಪ್ರಶಸ್ತಿಗೂ* ಏನು *ವ್ಯತ್ಯಾಸ?*

ಒಂದು ಶ್ವಾನಕ್ಕೆ ಎಸೆದ ಮೂಳೆ, ಮತ್ತೊಂದು ಜ್ಞಾನಕ್ಕೆ ಸಂದ ಅರ್ಚನೆ.

ಎಂ.ಎನ್. ಸೋಮಶೇಖರ್, ಮೈಸೂರು

*ಮಗು, ತಾಯಿಯ ಬಂಧ ಏಳೇಳು ಜನ್ಮದ ಬಂಧವೆಂದು ಏಕೆ ಹೇಳುತ್ತಾರೆ?*

ಬಾಲ್ಯದಿಂದ ವಿವಾಹದವರೆಗೆ ಅಮ್ಮ ಮಗುವನ್ನು ಏಳೇಳು (ಏಳು, ಏಳು) ಎಂದು ಎಬ್ಬಿಸುತ್ತಲೇ ಇರಬೇಕಾದ್ದರಿಂದ!

ಜೆ.ಪಿ. ರಾಜನ್, ಬೆಂಗಳೂರು

*ಒಂದು ಸನ್ಯಾಸಿ ಇನ್ನೊಂದು ಸನ್ಯಾಸಿನಿಯನ್ನು ಪ್ರೀತಿಸಿದರೆ ತಪ್ಪೇನು?*



ಕ್ಷಮಿಸಿ; ಕಾಷಾಯದ ಕಾಯಕ್ಕೆ ಕಾಮದ ಕಾವು ವರ್ಜ್ಯ.

ಡಾ. ವಿನಯ ಶ್ರೀನಿವಾಸ್, ಶಿವಮೊಗ್ಗ.

*ಪರಮಶಿವನಿಗೆ ಟಾಪ್ ಪ್ರಿಯಾರಿಟಿ ಯಾರು - ಗಂಗೆಯೋ, ಗೌರಿಯೋ?*

ಟಾಪ್ ಗಂಗೆ, ಪ್ರಿಯಾರಿಟಿ ಗೌರಿ.

ಡೈರಿ ವಿಶ್ವನಾಥ್, ಬೆಂಗಳೂರು

*ವೈದ್ಯರೇ ಎಡವಟ್ಟು ಮಾಡಿದರೆ?*

ಸ್ಮಶಾನದ ಬೂತ–ಬೂತಿಗಳು ಸಂತೋಷದಿಂದ ಡ್ಯುಯೆಟ್ ಹಾಡುತ್ತವೆ!

ಎಚ್.ಆರ್. ಕಡಿವಾಲ, ಬದಾಮಿ

*ಕಾರ್ಯಕ್ರಮದ ನಿರೂಪಣೆ ಮಾಡಲು ಹೆಣ್ಣು ಮಕ್ಕಳಿಗೆ ಹೇಳಲು ಕಾರಣವೇನು?*

ಕೃತಿ ಹೇಗೇ ಇರಲಿ ಆಕೃತಿ ನೋಡಿಕೊಂಡು ಜನ ಕುಳಿತುಕೊಳ್ಳುವರೆಂಬ ಭರವಸೆ.

ಆರಿಫ್, ದಾವಣಗೆರೆ

*ಬೆಕ್ಕು ಕಣ್ಣುಮುಚ್ಚಿಕೊಂಡು ಹಾಲು ಕುಡಿಯುವುದರ ನಿರ್ದಿಷ್ಟ ಅರ್ಥವೇನು?*

ಇಂತಹ ಕಳಪೆ ಮಟ್ಟದ ನೀರು ಹಾಲು ಕುಡಿಯುವುದಕ್ಕಿಂತ ಕಣ್ಣು ಮುಚ್ಚಿಕೊಳ್ಳುವುದೇ ವಾಸಿ ಎಂದು!

ಗಣೇಶ ಎಂ. ಪೈ, ಬೆಂಗಳೂರು

*ನನ್ನವಳಿಗೆ ಪಕ್ಕದ ಮನೆಯಾತನೇ ಚಂದ ಕಾಣಿಸುತ್ತಾನೆ. ಏನು ಮಾಡಲಿ?*

ಅಂದರೆ... ದೂರದಲ್ಲಿರುವವನು ಚಂದ ಕಾಣಿಸುತ್ತಾನೆ, ಹತ್ತಿರ ಇರುವವನು ಅಷ್ಟು ಚಂದ ಕಾಣಲ್ಲ; ಷಾರ್ಟ್ ಸೈಟ್; ಕನ್ನಡಕ ಕೊಡಿಸಿ!

ಮಹಾವೀರ ಕಾಸರ, ಚನ್ನಗಿರಿ

*ಮನೆ, ಮಠ ಬಿಟ್ಟವರು ಎಲ್ಲಿಗೆ ಹೋಗುತ್ತಾರೆ?*

ಮನ, ಮತ ಸೂಚಿಸಿದತ್ತ.

ಎಚ್.ಜಿ. ಜಗದೀಶ್, ಮೈಸೂರು

*ಮಠಾಧಿಪತಿಗಳಿಗೆ 1008 ಅನ್ನುವರಲ್ಲಾ, ಇದರ ಹಿನ್ನೆಲೆ ಏನು?*

ಶ್ರದ್ಧೆ, ಭಕ್ತಿ, ವಿದ್ಯೆ, ಸಹನೆ, ವಿವೇಕ, ಔದಾರ್ಯ, ನಿಗ್ರಹ, ಶಿಕ್ಷಣಗಳೆಂಬ ಸಾವಿರದ (ಸಾವಿಲ್ಲದ) ಎಂಟು ಗುಣಗಳನ್ನು ಹೊಂದಿದವರೆಂದು!

ಪ್ರಜ್ವಲ್ ಪಿ. ಬುರ್ಲಿ, ದಾವಣಗೆರೆ

*'ಹೆಂಡತಿ' - ಈ ಪದವನ್ನು ಬಿಡಿಸಿ ಸಂಧಿ ಹೇಳಿ ನೋಡೋಣ?*

ಹೆಣ್+ ಒಡತಿ = ಹೆಂಡತಿ. ಇದು ಒಕಾರಲೋಪ ಸಂಧಿ!

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

*ಅವಿವಾಹಿತ ಸುಂದರ ನರ್ಸ್‌ಗಳನ್ನು ಸಿಸ್ಟರ್ ಎಂದು ಕರೆಯಲು ಹುಡುಗರು ಹಿಂಜರಿಯಲು ಕಾರಣವೇನು?*

ಅವಳನ್ನು ಸಿಸ್ಟರ್ ತರಹ ಅಲ್ಲದೆ ಅಸಿಸ್ಟರ್ ತರಹ ನೋಡುವುದರಿಂದ.

## ಬಹುಮಾನಿತ ಪ್ರಶ್ನೆ

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ

*ಒಂದೊಮ್ಮೆ ಆಕಾಶಕ್ಕೂ ಏಣಿ ಹಾಕುವಂತೆ ಇದ್ದಿದ್ದರೆ...?*

'ವಿಮಾನ–ಏಣಿ ಢಿಕ್ಕಿ; ಹತ್ತು ಸಾವು' ಎನ್ನುವ ಸುದ್ದಿ ದಿನವೂ ಇರುತ್ತಿತ್ತು!

ಸೋಮಶೇಖರ್, ಎಲೆಮುದ್ದನಹಳ್ಳಿ

*ಕೆಲವೊಮ್ಮೆ ನಾವು ನಂಬಿರುವ ಮಿತ್ರರೇ ಶತ್ರುಗಳಾಗಿರುತ್ತಾರಲ್ಲಾ...?*

ಅವರನ್ನು ಒಡಹುಟ್ಟಿದವರೆಂದು ತಿಳಿದುಬಿಡಿ!

ಶೋಭಾ ಎಂ.ಆರ್. ಮರ್ಕುಲಿ

*ಶನಿದೇವರು ಕಾಗೆಯನ್ನೇ ವಾಹನವನ್ನಾಗಿ ಮಾಡಿಕೊಂಡದ್ದೇಕೆ?*

ಕಾಗೆಯ ಜಾತಕದಲ್ಲಿ ಜನ್ಮಸ್ಥಾನದಲ್ಲೇ ಶನಿ ಇದೆಯಂತೆ!

ಶ್ವೇತಾಲಕ್ಷ್ಮಿ ಅಮ್ಮೆ, ಬೆಂಗಳೂರು

*ಕಪ್ಪುಕನ್ನಡಕ ಧರಿಸುವವರ ನಿಜವಾದ ಉದ್ದೇಶವೇನು?*



ತೇಲುಗಣ್ಣು, ಮೇಲುಗಣ್ಣು, ಮೆಳ್ಳಗಣ್ಣು, ಕುಡುಕಕಣ್ಣು, ಕಾಮುಕ ಕಣ್ಣು ಸಮಾಜಕ್ಕೆ ಕಾಣದಿರಲೆಂದು!

ಜಯದೇವ ಹಲಕಿ, ಗೋಕಾಕ

*ರಾಮ್‌ಗೆ ರಮ್‌ನ ರಹಸ್ಯ ಗೊತ್ತೆ?*

ಗೊತ್ತು; ಅದು ಎರಡು ಸೀರೆ ಕಂಪನಿಗಳ ಹೆಸರಿನ ಕೊನೆಯ ಭಾಗ – ಧರ್ಮಾವರಮ್, ಕಾಂಚೀವರಮ್

ಕಾಳೀಹುಂಡಿ ಶಿವಕುಮಾರ್, ಮೈಸೂರು

*ಭಕ್ತಿಯ ಪರಾಕಾಷ್ಠೆಗೂ, ಪ್ರೀತಿಯ ಪರಾಕಾಷ್ಠೆಗೂ ಇರುವ ವ್ಯತ್ಯಾಸವೇನು?*

ಭಕ್ತಿಯ ಪರಾಕಾಷ್ಠೆ ನಿರ್ಮೋಹ, ಪ್ರೀತಿಯ ಪರಾಕಾಷ್ಠೆ ವ್ಯಾಮೋಹ.

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್

*ಪಾಠಶಾಲೆಗೂ, ಪಾಕಶಾಲೆಗೂ* ಏನು *ವ್ಯತ್ಯಾಸ?*

ಬುದ್ಧಿಗೊಂದು, ಬುತ್ತಿಗೊಂದು!

■ ರಾಮ್